**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 90 ಪ್ರಾ.ಸಾ. : 37**

| | |
|---|---|
| ಸಾಕ್ಷಿಯ ಹೆಸರು | : ಈಶ್ವರ ಹರಗಿ |
| ತಂದೆಯ ಹೆಸರು | : ಫರಾ ಹರಗಿ |
| ವಯಸ್ಸು | : 84 ವರ್ಷ |
| ಉದ್ಯೋಗ | : ಏನು ಇಲ್ಲಾ |
| ವಾಸ | : ಕಾನಗೋಡ, ಸಿದ್ದಾಪುರ ತಾಲೂಕು. |

**ದಿನಾಂಕಃ 10-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹುಟ್ಟಿದಾಗಿನಿಂದ ಕಾನಗೋಡ ಗ್ರಾಮದಲ್ಲಿ ವಾಸ ಆಗಿದ್ದೇನೆ. ಅಲ್ಲಿ ನನ್ನ ಸ್ವಂತ ಮನೆ ಇದೆ. ಆರೋಪಿಯ ಪರಿಚಯ ನನಗೆ ಇಲ್ಲ. ಆದರೆ ಆರೋಪಿಯನ್ನು ನಮ್ಮ ಗ್ರಾಮದಲ್ಲಿ ನೋಡಿದ್ದೇನೆ. ಆರೋಪಿ ನಮ್ಮ ಗ್ರಾಮ ಪಂಚಾಯತಿಯಲ್ಲಿ ಹಿಂದೆ ಅಧ್ಯಕ್ಷರು ಆಗಿದ್ದರು ಎಂದು ಕೇಳಿದ್ದೇನೆ. 2001-02 ರಲ್ಲಿ ಗ್ರಾಮ ಪಂಚಾಯತಿಯಿಂದ ಗ್ರಾಮ ಸ್ವಚ್ಛ ಯೋಜನೆ ಅಡಿಯಲ್ಲಿ ನಮ್ಮ ಗ್ರಾಮಕ್ಕೆ ರೂ. 20 ಲಕ್ಷ ಮಂಜೂರು ಮಾಡಿದ್ದರು ಮತ್ತು ಆ ಬಗ್ಗೆ 210 ಫಲಾನುಭವಿಗಳನ್ನು ನಮ್ಮ ಗ್ರಾಮದಲ್ಲಿ ಆಯ್ಕೆ ಮಾಡಿದ್ದರು ಮತ್ತು ನಾನು ಸಹಾ ಒಬ್ಬ ಫಲಾನುಭವಿ ಆಗಿದ್ದೆ ಎಂಬುವುದು ನನಗೆ ಗೊತ್ತಿಲ್ಲ. ನನಗೆ ಶೌಚಾಲಯವನ್ನು ಗ್ರಾಮ ಪಂಚಾಯತಿಯಿಂದ ಕಟ್ಟಿಸಿ ಕೊಟ್ಟಿಲ್ಲ. ನನಗೆ ರೂ. 3000/- ಸಹಾಯ ದನ ನೀಡಿರುವುದಿಲ್ಲ. ನಾನು ಪೊಲೀಸರನವರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ಆರೋಪಿ ನನ್ನ ಊರಿನವರಾಗಿರುವುದರಿಂದ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರಕ್ಷಕ ನಿರೀಕ್ಷಕರು, ಲೋಕಾಯುಕ್ತ ಕಾರವಾರವರ ಮುಂದೆ ನಿಪಿ–71 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ